ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

## ಒ. ಎಸ್. ಸಂಖ್ಯೆ 115/22

ಡಿಡಬ್ಲ್ಯೂ 1

ದಿನಾಂಕಃ 01.09.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಎಂ ಎಸ್ ಗಿರಿ ಶೇಖರ |
| ತಂದೆಯ ಹೆಸರು | – ಲೇಟ್ ಸೋಮಶೇಖರ |
| ವಯಸ್ಸು | – 44 ವರ್ಷ |
| ವೃತ್ತಿ | – ಎಫ್ ಡಿ ಎ, ಅಭಿವೃದ್ಧಿ ಇಲಾಖೆ, ಮಡಿಕೇರಿ |
| ವಾಸಸ್ಥಳ | – ಮಡಿಕೇರಿ |

ಮುಂದುವರೆದ ಪಾಟೀ ಸವಾಲುಃ– ವಾದಿಯ ಪರ ವಕೀಲರಾದ ಶ್ರೀ. ಬಿ ಕೆ ಎಸ್ ರವರಿಂದಃ–

ಒಂದು ವೇಳೆ ನೀವು ಕಟ್ಟಿಸಿದಂತಹ ಪಿಲ್ಲರ್ ಗಳು ಕುಸಿದು ಬಿದ್ದರೆ ವಾದಿಗೆ ಹಾಗೂ ಅವರ ಕುಟುಂಬದವರ ಜೀವಕ್ಕೆ ಅಪಾಯವಿದೆ ಹಾಗೂ ವಾದಿಯ ಮನೆಗೆ ಮತ್ತು ಶೆಡ್ಡಿಗೆ ಕೂಡ ತೊಂದರೆ ಆಗುತ್ತದೆ ಎಂದರೆ ಸರಿಯಲ್ಲ. ನಿಪಿ–17 ನೋಟಿಸ್ ನನಗೆ ಜಾರಿಯಾಗಿರುವುದಿಲ್ಲ. ನಿಪಿ–17 ನೋಟಿಸ್ ನನಗೆ ಜಾರಿಯಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಲ್ಲರನ್ನು ಕಟ್ಟುವ ಬಾಪ್ತು ನೀಲಿ ನಕಾಶೆಯನ್ನು ನೀವೇನಾದರು ಕಾರ್ಪೊರೇಷನ್ ಅವರಿಗೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಪಿ–17 ರಲ್ಲಿ ಬರೆದಿರುವ ವಿಚಾರ ನಿಮಗೆ ನ್ಯಾಯಾಲಯದ ಮುಂದೆ ಮೊದಲ ಬಾರಿಗೆ ತಿಳಿಯಿತಾ ಅಥವಾ ಮೊದಲೇ ಗೊತ್ತಿತ್ತಾ ಎಂದರೆ ಸಾಕ್ಷಿಯು ಇಂಜಿನಿಯರ್ ರವರು ಬಂದು ತಿಳಿಸಿರುತ್ತಾರೆ ಎನ್ನುತ್ತಾರೆ. ಆ ರೀತಿ ನಿಮಗೆ ಮೊದಲೇ ಇಂಜಿನಿಯರ್ ರವರು ತಿಳಿಸಿದಾಗ ನೀವೇನಾದರೂ ನಿಪಿ–17 ರ ಪ್ರತಿಯನ್ನು ಪಡೆದುಕೊಳ್ಳಲು ಪ್ರಯತ್ನ ಪಟ್ಟಿರಾ ಎಂದರೆ ಸಾಕ್ಷಿಯು ಇಲ್ಲ , ಅದರ ಅವಶ್ಯಕತೆ ಇರುವುದಿಲ್ಲ

ಎನ್ನುತ್ತಾರೆ. ಯಾವ ಕಾರಣಕ್ಕಾಗಿ ನೀವು ನಿಪಿ–17 ರ ಪ್ರತಿಯನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ, ನಮ್ಮ ಮನೆಯ ಬಳಿ ಬಂದಿದ್ದ ಇಂಜಿನಿಯರ್ ಅಧ್ಯಕ್ಷರ ಬಳಿ ಹೋಗಿ ಮಾತನಾಡಿ ಎಂದು ನನಗೆ ಹೇಳಿದರು. ನಿಪಿ–17 ನೋಟಿಸ್ ನನಗೆ ತಲುಪಿದ್ದರೂ ನಾನು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿಲ್ಲರನ್ನು ನಿರ್ಮಿಸಲು ಯಾವುದೇ ನೀಲಿ ನಕಾಶೆ ಹಾಗೂ ಪರವಾನಗಿ ಪಡೆದುಕೊಳ್ಳದೆ ಅಕ್ರಮವಾಗಿ ನಿರ್ಮಾಣ ಮಾಡಿರುವ ಕಾರಣ ನಿಪಿ–17 ನೋಟಿಸ್ ನನಗೆ ತಲುಪಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಪಿಲ್ಲರನ್ನು ನಿರ್ಮಿಸಿರುವ ಕಾರಣ ಒಂದು ವೇಳೆ ಅದು ಬಿದ್ದರೆ ವಾದಿಗೆ ಹಾಗೂ ಅವರ ಕುಟುಂಬಕ್ಕೆ ಜೀವ ಹಾನಿ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ವಾದಿ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ನಿರ್ಮಾಣ ಮಾಡಿರುವ ಪಿಲ್ಲರನ್ನು ತೆಗೆದು ಹಾಕಲು ನಾನು ಬದ್ದನಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಪಿಲ್ಲರ್ ಗಳನ್ನು ನಿರ್ಮಾಣ ಮಾಡಿದ್ದು, ಅದು ವಾದಿಗೆ ಹಾನಿ ಮಾಡುತ್ತದೆ ಎಂದು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ. ಎಂ. ಎಫ್. ಸಿ., ಮಡಿಕೇರಿ**